MA:29/2025
AW:01

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 07.07.2026.

**ಪಾಟೀ ಸವಾಲುಃ ಶ್ರೀ.ಕೆ.ಎಂ.ಜಿ ವಕೀಲರಿಂದ ಎದುರುದಾರರ ಪರವಾಗಿಃ**

ಈ ಕೇಸನ್ನು ಅಳತೆಯ ಸಂಬಂಧ ಗಲಾಟೆ ಆಗಿದ್ದಕ್ಕೆ ಸಲ್ಲಿಸಲಾಗಿರುತ್ತದೆ . ಅಸಲು ದಾವಾ 576/2024 ರಲ್ಲಿ ಅರ್ಜಿ ನಂ.1 ರ ಆದೇಶವಾದ 6 ತಿಂಗಳ ನಂತರ ಈ ಮೇಲ್ಮವಿಯನ್ನು ಸಲ್ಲಿಸಲಾಗಿರುತ್ತದೆ . ಪ್ರತಿವಾದಿಯವರು ಜಮೀನಿನ ಹತ್ತಿರ ಭೇಟಿ ಆಗಿ ಪಂಚಾಯಿತಿ ಮಾಡಲಾಗಿರುತ್ತದೆ . ಪ್ರತಿವಾದಿಯ ಜೊತೆಗೆ ರಾಜಿ ಪಂಚಾಯಿತಿ ಮಾಡಿದ ಕುರಿತು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಪಂಚಾಯಿತಿ ಮಾಡಿದ ಬಗ್ಗೆ ದಾಖಲಾತಿಗಳು ಸಿಗುವುದಿಲ್ಲ ಎಂದು ನುಡಿಯುತ್ತಾರೆ . ನಾನು ಹೇಳುವಂತೆ ಪ್ರತಿವಾದಿಯೊಂದಿಗೆ ಯಾವುದೇ ರಾಜಿ ಪಂಚಾಯಿತಿ ಆಗಿರುವುದಿಲ್ಲ ಮತ್ತು ಪ್ರತಿವಾದಿ ರಾಜಿ ಪಂಚಾಯಿತಿಗೆ ಬಂದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಮೇಲ್ಮನವಿಯನ್ನು ಸಲ್ಲಿಸಲು ಕಾಲ ವಿಳಂಬವಾಗಿರುವುದರಿಂದ ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದರೆ ಸರಿಯಲ್ಲ . ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 07.07.2026 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಸಿದ್ದಣ್ಣ.ಬಿ.ಹಂದ್ರಾಳ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.